ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಸಾಹಿತಿಗಳ ಹೆಸರನ್ನು ಬೆಂಗಳೂರಿನ ನಗರದ ಬಡಾವಣೆಗಳಿಗೆ, ರಸ್ತೆಗಳಿಗೆ ಇಡುವ ಬಗ್ಗೆ.

೪೮೦. ಶ್ರೀ ಪೆರಿಕಾಲ್ ಎಂ. ವಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಸಾಹಿತಿಗಳ (ಕುವೆಂಪು, ಬೇಂದ್ರೆ, ಶಿವರಾಮ ಕಾರಂತ್, ಪುಟ್ಟಿ ವೆಂಕಟೇಶ ಅಯ್ಯಂಗಾರ್) ಹೆಸರುಗಳನ್ನು ಬೆಂಗಳೂರು ನಗರದ ಬಡಾವಣೆ ಅಥವಾ ರಸ್ತೆಗಳಿಗೆ ಇಡಲಾಗಿದೆಯೇ? ಹಾಗಿದ್ದಲ್ಲಿ ಅವು ಯಾವುವು?

ಆ) ಹಾಗಿಲ್ಲದಿದ್ದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಹೆಸರುಗಳನ್ನು ಬೆಂಗಳೂರು ನಗರದ ಬಡಾವಣೆಗಳಿಗೆ ರಸ್ತೆಗಳಿಗೆ ಇಡದೇ ಇರಲು ಕಾರಣಗಳೇನು? ಆ ರೀತಿ ಇಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಇ) ಪುಟ್ಟಿ ವೆಂಕಟೇಶ್ ಅಯ್ಯಂಗಾರ್ ಅವರು ವಾಸಿಸುತ್ತಿದ್ದ, ಗವೀಪುರಂ ವಿಸ್ತರಣೆಗೆ ಅವರ ಹೆಸರನ್ನು ಇಡುವ ಬಗ್ಗೆ ಪರಿಶೀಲಿಸಲಾಗುವುದೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು)

ಅ) ಹೌದು. ಮೈಸೂರು ರಸ್ತೆಯಿಂದ ಮೈಸೂರು ಸೋಪು ಕಾರ್ಖಾನೆ ವೃತ್ತದವರೆಗೆ "ದ. ರಾ. ಬೇಂದ್ರೆ" ರಸ್ತೆ ಎಂದು ಮತ್ತು ಮಾಲೇಶ್ವರ ವೃತ್ತದಿಂದ ನವರಂಗ್ ಚಿತ್ರ ಮಂದಿರದ ವೃತ್ತದವರೆಗೆ "ಕುವೆಂಪು ರಸ್ತೆ" ಎಂದು ನಾಮಕರಣ ಮಾಡಲಾಗಿದೆ.

ಆ) (ಅ) (ಆ) ನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ) ಈ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪ್ರಸ್ತಾವನೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಿಗೆ, ರಸ್ತೆಗಳಿಗೆ ನಾಮಕರಣ ಮಾಡುವ ಬಗ್ಗೆ.

೪೮೮. ಶ್ರೀ ಪೆರಿಕಲ್ ಎಂ. ವಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಿಗೆ ಹೆಸರುಗಳನ್ನು ಇಡಲು ಯಾವ ವ್ಯವಸ್ಥೆ ಇದೆ. ಹಾಗಿಲ್ಲದಿದ್ದರೆ ಈ ರೀತಿ ನಾಮಕರಣ ಮಾಡಲು ಒಂದು ಸಮಿತಿಯನ್ನು ರಚಿಸಲಾಗುವುದೇ?

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಿಗೆ ಬೇಗ ಹೆಸರನ್ನು ಇಡದೇ ಇರುವುದರಿಂದ ಅವುಗಳು ಜನರ ಬಾಯಲ್ಲಿ ಒಂದನೇ ಹಂತ, ಎರಡನೇ ಹಂತ, ಮೂರನೇ ಹಂತ, ೫೦ ಅಡಿ ರಸ್ತೆ, ೮೦ ಅಡಿ ರಸ್ತೆ, ೧೦೦ ಅಡಿ ರಸ್ತೆ ಇತ್ಯಾದಿಯಾಗಿ ರೂಢಿಗತವಾಗುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುವುದಿಲ್ಲವೇ?

ಇ) ಈ ರೀತಿ ಬಡಾವಣೆಗಳಿಗೆ ಕನ್ನಡ ಕವಿಗಳು, ಸಾಹಿತಿಗಳು, ಕಲಾವಿದರು ಹಾಗೂ ರಾಜಮಹಾರಾಜರ ಹೆಸರುಗಳನ್ನು ಇಟ್ಟು ಅವುಗಳನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮವನ್ನು ಅಭಿವೃದ್ಧಿ ಪ್ರಾಧಿಕಾರದವರು ಹಾಕಿಕೊಳ್ಳುವರೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಿಗೆ ಹೆಸರುಗಳನ್ನು ಇಡಲು ಸರ್ಕಾರದ ಒಪ್ಪಿಗೆ ಪಡೆಯಲಾಗುವುದು.

ಆ) ಇಲ್ಲ

ಇ) ಹೌದು